ಭಟ್ಟರ್ ಸ್ಕ್ಯಾಚ್

● ತಮ್ಮೇಶ ಗೌಡ, ಹಾರೋಹಳ್ಳಿ
ಭಟ್ರೇ, ಮದುವೆ ಬೇಡ, ಫ್ರೆಂಡ್ಸ್ ಆಗಿ ಇರೋಣ ಅಂತಾಳಲ್ಲ?
– ಮನೆ ಭಾಗ್ಯಕ್ಕಿಂತ, ಮನೆ ಭೋಗ್ಯವೇ ಲೇಸು ಅಂದಾಂಗಾಯ್ತು!

● ಪಚ್ಚು, ಮೈಸೂರು
ಭಟ್ರೇ, ಹೆಂಡತಿ ಪ್ರೀತಿಯಿಂದ ಕಚ್ಚಿದರೆ ಹೇಗಿರುತ್ತದೆ?
– ಪ್ರೀತಿಯಿಂದ ಮೆಣಸಿನ ಸಾರು ಮಾಡಿದಂತಿರುತ್ತದೆ!

● ಎನ್ನಾರ್ ಸತೀಶ, ಕೊಪ್ಪ
ಭಟ್ರೇ, ಈ ಪ್ಲಾನೆಟ್ ಮೇಲೆ ನಿನ್ನಂಥ ಸುಂದರ ಇಲ್ಲ ಅಂತಾಳಲ್ಲ?
– ಅನಿಮಲ್ ಪ್ಲಾನೆಟ್ ಚಾನೆಲ್ಲಿನಲ್ಲಿ ಕೋತಿಗಳ ಸೀರಿಸ್ ನೋಡಿದರ ಪರಿಣಾಮ!

● ಶಶಿಧರ ಸಿದ್ದಾಪುರ, (ಇಮೇಲ್ ಮೂಲಕ)
ಭಟ್ರೇ, ಉಚಾ ಕತ್ತೆಮನೆ ಇಡಗಂಟು ಕಳೆದುಕೊಂಡ ಕನಸು?
– ಆ ಇಡಗಂಟೂ ಇರೊಲ್ಲ ಅಂತಾ?!

● ಕೆ.ಜಿ.ಸುಂಕದ, ಬೆಂಗಳೂರು
ಭಟ್ರೇ, ಅಕ್ಕದ ಮನೆಯವಳು ವಾಸಿನೋ, ಪಕ್ಕದಮನೆಯವಳು ವಾಸಿನೋ?
– ಮೇಲಿನ ಮನೆಯವಳು ವಾಸಿನೋ, ಕೆಳಗಿನ ಮನೆಯವಳು ವಾಸಿನೋ ಅಂತ ಕೇಳಿದ್ದರೆ ಉತ್ತರಿಸುತ್ತಿದ್ದೆ!

● ಕೆ.ಮಂಜುನಾಥ, ಗಂಟಿಕೇರಿ
ಭಟ್ರೇ, ದಿನ ಸುಳ್ಳು ಬರೆದರೂ ಯಾರೂ ಮಾನನಷ್ಟ ಮೊಕದ್ದಮೆ ಹಾಕುವುದಿಲ್ಲವಲ್ಲ?
– ಜ್ಯೋತಿಷಿ ದ್ವಾರಕಾನಾಥರನ್ನು ನೀನು ಅಷ್ಟು ಲಘುವಾಗಿ ಪರಿಗಣಿಸಬಾರದಿತ್ತು!

● ವಾಗೀಶ ಶಾಸ್ತ್ರೀ, ವಿಜಯನಗರ
ಸರ್, ರಾತ್ರಿ ಕಂಡ ಬಾವಿಯಲ್ಲಿ ಹಗಲು ಹೊತ್ತಿನಲ್ಲೇ ಹೋಗಿ ಬೀಳುತ್ತಾರಲ್ಲ?
– ಬೋರ್ ವೆಲ್‌ನಲ್ಲಿ ಬೀಳೋಣ ಅಂದ್ರೆ ಆಗೊಲ್ವೆ?!

● ಶಂಕರ ಗುನಗ, ಉಡುಪಿ
ಭಟ್ರೇ, ಮನೆಯಲ್ಲಿ ಯಾರೂ ಇಲ್ಲ, ಆದ್ರೂ ಮೋರಿ ಹತ್ರ ಬಾ ಅಂತಾಳಲ್ಲ?
– ಯಾರನ್ನು ಎಲ್ಲಿಡಬೇಕು ಅನ್ನೋದನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿರಬೇಕು!

● ಸವಣೂರು ರುದ್ರೇಶ, ಗದಗ
ಭಟ್ರೇ, ಮರದ ಕೆಳಗೆ ಮಲಗಿದ್ರೂ ಗಾಳಿಯೇ ಬೀಸುವುದಿಲ್ಲವಲ್ಲ?
– ಕೊಂಬೆಗೊಂದು ಫ್ಯಾನ್ ಕಟ್ಟಿಕೊಳ್ಳಬಾರದಾ? ಇನ್ನೂರು ಯುನಿಟ್ ಪುಕಟ್ ಕೊಡ್ತಿದಾರಲೇ ಬಾಡ್ಯಾ !

● ರಮೇಶ ಗೌಡ, ಮಳವಳ್ಳಿ
ಸಾರ್, ಜೆಡಿಎಸ್ ಸೋತ ಬಳಿಕ ಹಾಸನದಲ್ಲಿ ನಾಯಕರ ಮಂದಹಾಸವೇ ಮಾಯವಾಗಿದೆಯಲ್ಲ?
– ನವೀನ ಸಾಗರ್ ಕೇಳಿದ್ರೆ ಇದಕ್ಕೆ 'ಮಂದಹಾಸನ' ಎನ್ನಬಹುದು!

ಇದರಿಂದ ತಯಾರಿಸಿದ ಕಜ್ಜಾಯ ಬಲು ರುಚಿ!

ಶಶಾಂಕಣ
ಶಶಿಧರ ಹಾಲಾಡಿ
shashidhara.halady@gmail.com

ನಮಗೆ ಒಬ್ಬರು ಅಮ್ಮಮ್ಮ ಇದ್ದರು. ನಮ್ಮ ತಂದೆಯ ತಾಯಿ; ಅವರನ್ನು 'ಅಮ್ಮಮ್ಮ' ಎಂದು ಕರೆಯುವ ರೂಢಿ. ಹಾಗೆ ನೋಡಿದರೆ, ಅವರನ್ನು 'ಅಪ್ಪಮ್ಮ' ಎಂದೇ ನಾವು ಕರೆಯಬೇಕಿತ್ತು. ನಮ್ಮೂರಿನ ಸುತ್ತ ಮುತ್ತ, ತಂದೆಯ ತಾಯಿಯನ್ನು ಅಪ್ಪಮ್ಮ ಎಂದು ಕರೆಯುವ ಅಭ್ಯಾಸವಿದೆ. ಆದರೆ ಇವರಿಗೆ ಅದಾಗಲೇ ಅಮ್ಮಮ್ಮ ಎಂಬ ಹೆಸರು ರೂಢಿಯಾಗಿದ್ದರಿಂದ, ನಾವು ಅವರನ್ನು ಹಾಗೆಯೇ ಕರೆದಿರಬೇಕು ಅನಿಸುತ್ತದೆ. ಅವರ ವಿಚಾರ ಈಗೇಕೆ ಬಂತು ಅಂದರೆ, ಅವರು ತಮ್ಮ ಬಾಲ್ಯಕಾಲದ ಕೆಲವು ವಿಚಾರಗಳನ್ನು ಆಗಾಗ ಹೇಳಿಕೊಳ್ಳುವುದಿತ್ತು. ಅವರಿಗೆ ಅದಾಗಲೇ ಸುಮಾರು 60 ವರ್ಷ; ಅವರ ಬಾಲ್ಯ ಕಾಲದ ವಿಚಾರಗಳು ಎಂದರೆ, ಅದಕ್ಕೂ ನಾಲ್ಕೈದು ದಶಕದ ಹಿಂದಿನ ವಿಚಾರಗಳು!

ಅಂತಹ ವಿಚಾರಗಳಲ್ಲಿ ಒಂದು ಎಂದರೆ 'ಹೆಬ್ಬಲಸಿನ ಬೀಜದ ಎಣ್ಣೆ'. ನಮ್ಮ ಮನೆಯ ಹಿಂಭಾಗದ ಹಕ್ಕಲಿನ ಅಂಚಿನಲ್ಲಿ ನಾಲ್ಕು ಬೃಹದಾಕಾರದ ಹೆಬ್ಬಲಸಿನ ಮರಗಳಿದ್ದವು; ಅವುಗಳ ಬಂಗಾರದ ಬಣ್ಣದ ತೊಳೆಗಳ ಕುರಿತು ಕಳೆದ ವಾರ ಇದೇ ಅಂಕಣದಲ್ಲಿ ಬರೆದಿದ್ದೆ. ಹೆಸರು ಹಿರಿದು ಎನಿಸಿದ್ದರೂ, ಆ ಮರಗಳು ಬಿಡುವ ಕಾಯಿಯು ಪುಟ್ಟದು, ಹಲಸಿನ ಮಿನಿಯೇಚರ್; ಕಸಿ ಮಾವಿನ ಹಣ್ಣಿನ ಗಾತ್ರದ ಹೆಬ್ಬಲಸಿನ ಹಣ್ಣಿನ ಮೇಲ್ಮೈ ತುಂಬಾ ಮುಳ್ಳುಗಳು; ಒಳಗೆ ಹತ್ತೈವತ್ತು ಪುಟಾಣಿ ತೊಳೆಗಳು. ಬಿರುಬೇಸಿಗೆಯಲ್ಲಿ ಹಣ್ಣಾಗುವ ಆ ಬಂಗಾರದ ಬಣ್ಣದ ತೊಳೆಗಳು ನಿಜಕ್ಕೂ ರುಚಿಕರ.

ಅದರ ಬೀಜದಿಂದ ಎಣ್ಣೆ ಮಾಡಬಹುದು ಎಂದು ನಮ್ಮ ಅಮ್ಮಮ್ಮ ಹೇಳುತ್ತಿದ್ದಾಗ, ನಮಗೆಲ್ಲಾ ಅಂದರೆ ಮಕ್ಕಳಿಗೆ ಅಚ್ಚರಿ, ವಿಸ್ಮಯ. ಏಕೆಂದರೆ, ನಮ್ಮ ಮನೆಯ ಹತ್ತಿರವೇ ಇದ್ದ ಆ ನಾಲ್ಕು ಮರಗಳು ಪ್ರತಿವರ್ಷ ಸಾವಿರಾರು ಹಣ್ಣುಗಳನ್ನು ಬಿಡುತ್ತಿದ್ದು, ಆ ಹಣ್ಣುಗಳ ಬೀಜಗಳ ರಾಶಿಯೇ ಮರದ ಅಡಿ ಚೆಲ್ಲಾಡುತ್ತಿತ್ತು. ನಾವು ಕಂಡಂತೆ ಅದನ್ನು ಯಾರೂ ಒಯ್ಯುತ್ತಿರಲಿಲ್ಲ. ಹಿಂದಿನ ಕಾಲದಲ್ಲಿ ಆ ಬೀಜಗಳನ್ನು ಹೆಡಿಗೆಗಳಲ್ಲಿ ತುಂಬಿ, ಮನೆಗೆ ಕೊಂಡೊಯ್ದು ಎಣ್ಣೆ ಮಾಡುತ್ತಿದ್ದರು, ಈಗ ಕಡಿಮೆ ಎನ್ನುತ್ತಿದ್ದರು. ನಾನು ಕಂಡಾಗಲೇ ಆ ಪದ್ಧತಿ ಬಹುಪಾಲು ನಿಂತು ಹೋಗಿತ್ತು; ಎಲ್ಲೋ ಅಲ್ಲಲ್ಲಿ ಕುಡುಬಿ ಜನಾಂಗದ ರಾಧಾ ಬಾಯಿ, ಬಚ್ಚಿಬಾಯಿಯಂತಹವರು ಆ ಬೀಜ ಕೊಂಡೊಯ್ದು ಅಪರೂಪಕ್ಕೊಮ್ಮೆ ಎಣ್ಣೆ ಮಾಡುತ್ತಿದ್ದರಂತೆ.

ಈ ರೀತಿ, ಹೆಬ್ಬಲಸಿನ ಹಣ್ಣಿನ (ಹೆಸಿನ ಹಣ್ಣು ಎಂಬ ಹೆಸರೂ ಇದೆ) ಬೀಜದಿಂದ ಎಣ್ಣೆ ಮಾಡುವ ಪದ್ಧತಿ ಇತ್ತು ಎಂದು ಫೇಸ್‌ಬುಕ್‌ನಲ್ಲಿ ಹಾಕಿದಾಗ, ಅದನ್ನೋದಿದ ಕೆಲವರು ' ಈಗಲೂ ಅಲ್ಲಲ್ಲಿ ಅದರಿಂದ ಎಣ್ಣೆ ಮಾಡುವವರಿದ್ದಾರೆ, ಆದರೆ ಬಹಳ ಅಪರೂಪ' ಎಂದು ಪ್ರತಿಕ್ರಿಯಿಸಿದರು. ಬೀಜವನ್ನು ದೊಡ್ಡ ಪಾತ್ರೆಗೆ ತುಂಬಿ, ನೀರಿನಲ್ಲಿ ಚೆನ್ನಾಗಿ ಬೇಯಿಸಿದರೆ, ಮೇಲ್ಭಾಗದಲ್ಲಿ ಎಣ್ಣೆಯು ಹೆರೆಯಂತೆ ತೇಲುತ್ತದಂತೆ. ಅದನ್ನು ಸೌಟಿನಲ್ಲಿ ತೆಗೆದು, ಇನ್ನೊಮ್ಮೆ ಕುದಿಸಿ, ನೀರಿನ ಪಸೆಯನ್ನು ಆವಿ ಮಾಡಿದಾಗ, ಹೆಬ್ಬಲಸಿನ ಎಣ್ಣೆ ಸಿದ್ಧ.

ವಿಶೇಷವೆಂದರೆ ಇದು ಖಾದ್ಯ ತೈಲ! ದೋಸೆ ಮಾಡುವಾಗ ಹಚ್ಚಲು, ಎಣ್ಣೆ ತಿಂಡಿ ಕರಿಯಲು ಇದರ ಉಪಯೋಗ. ಹೆಬ್ಬಲಸಿನ ಎಣ್ಣೆ ಬಳಸಿ ತಯಾರಿಸಿದ ಅತ್ರಾಸ (ಅತಿರಸ ಅಥವಾ ಕಜ್ಜಾಯ) ಬಹಳ ರುಚಿ ಎಂದು ಉಡುಪಿ ಜಿಲ್ಲೆಯ ಕೆಲವು ಫೇಸ್‌ಬುಕ್ ಗೆಳೆಯರು ಬಾಯಿ ಚಪ್ಪರಿಸಿದರು. ಆದರೆ, ಆ ಪುಟಾಣಿ ಬೀಜಗಳನ್ನು ಕಾಡಿನಿಂದ ತಂದು, ಒಣಗಿಸಿ, ಬೇಯಿಸಿ ಎಣ್ಣೆ ತೆಗೆಯುವ ಕೆಲಸ ಶ್ರಮದಾಯಕ ಎಂದೋ ಅಥವಾ ಹಳೆಯ ಕಾಲದ ಇಂತಹ ವಸ್ತುಗಳ ಕುರಿತು ನಮ್ಮೆಲ್ಲರಲ್ಲೂ ಇರುವ ಸಾರ್ವತ್ರಿಕ ನಿರ್ಲಕ್ಷ್ಯದಿಂದಲೋ ಏನೋ, ಹೆಬ್ಬಲಸಿನ ಎಣ್ಣೆ ತಯಾರಿಸುವ ಪದ್ಧತಿ ನಮ್ಮ ಹಳ್ಳಿಯಲ್ಲಿ ಬಹುಪಾಲು ನಿಂತೇ ಹೋಗಿದೆ. ಎಷ್ಟರ ಮಟ್ಟಿಗೆ ಎಂದರೆ, ನಮ್ಮೂರಲ್ಲೇ ಹುಟ್ಟಿ ಬೆಳೆದ ಈಗಿನ ಯುವಜನಾಂಗಕ್ಕೆ ಅಂತಹದೊಂದು ಖಾದ್ಯತೈಲ ಬಳಕೆಯಲ್ಲಿತ್ತು ಎಂಬ ಮಾಹಿತಿಯೇ ಇಲ್ಲ!

ನಮ್ಮ ಅಮ್ಮಮ್ಮ ಹೇಳುತ್ತಿದ್ದ ಇನ್ನೊಂದು ಎಣ್ಣೆ ಎಂದರೆ ಹೊನ್ನೆಣ್ಣೆ. ಇದು ಖಾದ್ಯ ತೈಲವಲ್ಲ, ಬದಲಿಗೆ ದೀಪ ಉರಿಸಲು ಬಳಸುತ್ತಿದ್ದ ಎಣ್ಣೆ. ಈ ಎಣ್ಣೆಯ ಕುರಿತು ನನಗೆ ಗೊತ್ತಾದಾಗ, ಅದಾಗಲೇ, ನಮ್ಮೂರಲ್ಲಿ ದೀಪ ಉರಿಸಲು ಚಿಮಿಣಿ ಎಣ್ಣೆ ಬಳಕೆ ಸಾರ್ವತ್ರಿಕವಾಗಿತ್ತು; ಅಲ್ಲಲ್ಲಿ ಕೆಲವರ ಮನೆಗಳಲ್ಲಿ, ಅದರಲ್ಲೂ ಮುಖ್ಯರಸ್ತೆಗೆ ಹತ್ತಿರ ಇರುವವರ ಮನೆಗಳಲ್ಲಿ ವಿದ್ಯುತ್ ಸಂಪರ್ಕವೂ ಬಂದಿತ್ತು. ನಾನು ಡಿಗ್ರಿ ಓದುವ ತನಕವೂ ನಮ್ಮ ಮನೆಗೆ ಬೆಳಕು ನೀಡುತ್ತಿದ್ದುದು ಚಿಮಿಣಿ ಎಣ್ಣೆ ಅಥವಾ ಸೀಮೆ ಎಣ್ಣೆ. ಆದರೆ ಅದಕ್ಕೆ ಆಗ ಬರ; ಪ್ರತಿ ತಿಂಗಳು ರೇಷನ್ ಕಾರ್ಡ್ ಮೂಲಕ ನಿಗದಿತ ಪ್ರಮಾಣದ ಚಿಮಿಣಿ ಎಣ್ಣೆ ತಂದು ಉರಿಸಬೇಕಿತ್ತು. ಮನೆಯಲ್ಲಿ ಚಿಮಿಣಿ ಎಣ್ಣೆ ಖಾಲಿಯಾಗುತ್ತಾ ಬಂದಾಗ, ಅಮ್ಮಮ್ಮನ ಉದ್ಗಾರ – ಮೊದಲೆಲ್ಲಾ ಹೊನ್ನೆಣ್ಣೆಯಿಂದಲೇ ದೀಪ ಹಚ್ಚುವುದು, ಅದು ಕಣ್ಣಿಗೆ ತಂಪು, ಚಿಮಿಣಿ ಎಣ್ಣೆಯ ಹೊಗೆ ಗರ್ಮಿ; ಹೊನ್ನೆಣ್ಣೆಯ ಮಿತವ್ಯಯಕ್ಕಾಗಿ, ಪ್ರತಿ ರಾತ್ರಿ, 7-7.30ಕ್ಕೆಲ್ಲಾ ಊಟ ಮುಗಿಸಿ, ದೀಪ ಆರಿಸಿ ಎಲ್ಲರೂ ಮಲಗುತ್ತಿದ್ದರು ಎನ್ನುತ್ತಿದ್ದರು ಅಮ್ಮಮ್ಮ. ನಿಜ ಇರಬಹುದು, ಏಕೆಂದರೆ ಅವರ ಕಾಲದಲ್ಲಿ ಯಾರೂ ಶಾಲೆಗೆ ಹೋಗುವ ಕೆಲಸ ಮಾಡುತ್ತಿರಲಿಲ್ಲವಲ್ಲ! ನಮ್ಮ ಅಮ್ಮಮ್ಮನೂ ಹೆಚ್ಚು ಓದಿದವರಲ್ಲ.

ನಮ್ಮೂರಿನ ಗದ್ದೆ ಬಯಲಿನ ಅಂಚಿನಲ್ಲಿ ಹರಿಯುತ್ತಿದ್ದ ತೋಡಿನ ಬದುವಿನಲ್ಲಿ ಅಲ್ಲಲ್ಲಿ ಹೊನ್ನೆ ಮರಗಳು ಬೆಳೆದಿದ್ದವು; ಮಧ್ಯಮ ಗಾತ್ರ, ದಟ್ಟ ಹಸಿರಿನ ದಪ್ಪ ಎಲೆಗಳು, ಸುಗಂಧ ಭರಿತ, ಬಿಳಿ ಹೂವುಗಳ ಗೊಂಚಲು; ಆ ಹೂವಿನ ಸುತ್ತಲೂ ಸದಾಕಾಲ ಪುಟ್ಟ ಪುಟ್ಟ ಜೇನು ಮತ್ತಿತ್ತರ ಕೀಟಗಳ ಹಾರಾಟ. ಸಣ್ಣ ಲಿಂಬೆ ಹಣ್ಣಿನ ಗಾತ್ರದ ಕಾಯಿಗಳು ಅದರ ಕೊಂಬೆಗಳಲ್ಲಿ ಜೋತಾಡುತ್ತಿದ್ದವು. ಪ್ರತಿ ಮರವೂ ನೂರಾರು ಕಾಯಿಗಳನ್ನು ಬಿಡುತ್ತಿತ್ತು; ಅದನ್ನು ಒಣಗಿಸಿ, ಹೊರಕವಚವನ್ನು ಜಜ್ಜಿ, ತಿರುಳನ್ನು ಬೇಯಿಸಿದರೆ ಎಣ್ಣೆ ಸಿಗುತ್ತಿತ್ತು. ಹಣತೆ, ಸೊಡರುಗಳಲ್ಲಿ ಎಣ್ಣೆ ಹಾಕಿ, ಬತ್ತಿ ಹಚ್ಚುವ ಮೂಲಕ ಮನೆಗೆ ಬೆಳಕು. ಹೊನ್ನೆಣ್ಣೆ ತಯಾರಿಸಲು ಅಪಾರ ಶ್ರಮ ಅಗತ್ಯ – ಕಾಯಿ ಆರಿಸಿ ತರುವುದು, ಒಣಗಿಸುವುದು, ಜಜ್ಜುವುದು, ತಿರುಳನ್ನು ತೆಗೆದು ಬೇಯಿಸುವುದು, ಅದಕ್ಕೆ ಉರುವಲು – ಹೀಗೆ. ವರ್ಷವಿಡೀ ಪ್ರತಿ ರಾತ್ರಿ ಬೆಳಕು ಬೇಕಿದ್ದರೆ ಇಷ್ಟೊಂದು ಶ್ರಮ ವಹಿಸಲೇಬೇಕಿತ್ತು. ಅದಕ್ಕೆಂದೇ, ಹೆಚ್ಚು ಎಣ್ಣೆ ವ್ಯಯ ಮಾಡದೇ, ಸಂಜೆಯಾದ ಕೂಡಲೇ ಮಲಗುವ ಅಭ್ಯಾಸ ಅಂದು ಬೆಳೆದಿತ್ತು! ನಾನು ಶಾಲೆಗೆ ಹೋಗುವಾಗ, ರಾತ್ರಿ 9 ಗಂಟೆಯ ನಂತರ ಚಿಮಿಣಿ ದೀಪ ಉರಿಸುತ್ತಾ, ಹೋಂ ವರ್ಕ್ ಮಾಡುತ್ತಿದ್ದರೆ, ಅಮ್ಮಮ್ಮ ಗೊಣಗುತ್ತಿದ್ದರು – ಅವರ ಕಾಲದಲ್ಲಿ 7 ಗಂಟೆಗೇ ದೀಪ ಆರಿಸಬೇಕಿತ್ತಂತೆ! ಇಲ್ಲವಾದರೆ ಹಿರಿಯರು ಬೈಯ್ಯುತ್ತಿದ್ದರಂತೆ – ಹೊನ್ನೆಣ್ಣೆಯ ಮಿತವ್ಯಯಕ್ಕಾಗಿ ಈ ಉಪಾಯ.

ಹೊನ್ನೆಣ್ಣೆ ಮತ್ತು ಇತರ ಎಣ್ಣೆಗಳನ್ನು ತಲೆಯ ಮೇಲೆ ಹೊತ್ತು ಮಾರುತ್ತಿದ್ದ 'ಎಣ್ಣೆಗೆಂಟಿ ಹೊನ್ನಮ್ಮ' ಎಂಬ ಮಹಿಳೆಯ ಕುರಿತಾದ ಹಲವು ಜನಪದ ಕಥನಗಳು, ಪದ್ಯಗಳು ನಮ್ಮೂರಿನಲ್ಲಿ ಚಾಲ್ತಿಯಲ್ಲಿದ್ದವು. ಬಹುದೂರದಿಂದ ಕಾಲ್ನಡಿಗೆಯಲ್ಲೇ ಮನೆಮನೆಗೆ ಬಂದು, ಎಣ್ಣೆ ಮಾರುತ್ತಿದ್ದ ಆಕೆಯ ಬದುಕು ದುರಂತದ ಗಂಟು – ಆ ಕಷ್ಟಜೀವಿ ಮಹಿಳೆಯ ಕಥನವು ನೂರಾರು ವರ್ಷಗಳ ಹಿಂದಿನದಿರಬೇಕು; ಅದೇ ವಿವಿಧ ರೂಪ ಪಡೆದು ಜನಪದರ ಬಾಯಲ್ಲಿ ಹರಿದುಬಂದಿದೆ. ನಮ್ಮೂರಿನ ರೇಷನ್ ಅಂಗಡಿಗಳಲ್ಲಿ ರೇಷನ್ ಕಾರ್ಡ್‌ಗೆ ಇಂತಿಷ್ಟು ಎಂದು ಸೀಮೆ ಎಣ್ಣೆ ದೊರೆಯಲು ಆರಂಭವಾದ ನಂತರ, ಹೊನ್ನೆಣ್ಣೆಯು ಮೂಲೆಗುಂಪಾಯಿತು; ಎಷ್ಟರ ಮಟ್ಟಿಗೆ ಎಂದರೆ, ನಮ್ಮ ಬಯಲಿನುದ್ದಕ್ಕೂ ಇದ್ದ ಹತ್ತಾರು ಹೊನ್ನೆ ಮರಗಳಲ್ಲಿ ಸಾವಿರಾರು ಕಾಯಿಗಳಾದರೂ, ಯಾರೂ ಅದನ್ನು ಸಂಗ್ರಹಿಸುವ ಗೋಜಿಗೇ ಹೋಗುತ್ತಿರಲಿಲ್ಲ. ಈಗ ಹೋಗಿ ನೋಡಿದರೆ,ಅಲ್ಲಿ ಹೊನ್ನೆ ಮರಗಳೇ ಇಲ್ಲ! ಹೊನ್ನೆಣ್ಣೆ ಎಂಬುದೊಂದು ಇತ್ತು ಎಂಬ ವಿಚಾರವನ್ನೇ ನಾವು ಮರೆತುಬಿಟ್ಟಿದ್ದೇವೆ!

ಹಾಡಿ ಹಕ್ಕಲುಗಳಲ್ಲಿ ಬೆಳೆಯುತ್ತಿದ್ದ ಮುಳ್ಳು ಹರಳು ಎಂಬ, ಮೈತುಂಬಾ ಮುಳ್ಳುಗಳನ್ನು ಬೆಳೆಸಿಕೊಂಡಿರುವ ಮಧ್ಯವ ಗಾತ್ರದ ಮರದ ಬೀಜದಿಂದಲೂ ಎಣ್ಣೆ ತಯಾರಿಸುತ್ತಿದ್ದರು. ಅದರ ಎಣ್ಣೆಗೆ ಕೆಟ್ಟ ವಾಸನೆ, ಆದ್ದರಿಂದ ಹೋರಿ ಬೆನ್ನಿಗೆ ಹಚ್ಚುವುದಕ್ಕೇ ಸೈ ಎನ್ನುತ್ತಿದ್ದರು ನಮ್ಮ ಅಮ್ಮಮ್ಮ. ಆ ಮರವನ್ನು ಕಂಡಿದ್ದೆ, ಅದರ ಕಾಯಿಗಳು ಪುಟ್ಟ ಬುಗುರಿಯ ರೀತಿ ಇರುವುದರಿಂದ, ನಾವು ಮಕ್ಕಳು ಅದನ್ನು ಬಳಸಿ ಬುಗರಿ ಆಡುತ್ತಿದ್ದೆವು. ಆದರೆ, ಮುಳ್ಳುಹರಳಿನ ಎಣ್ಣೆಯನ್ನು ನಾನು ಕಂಡಿದ್ದಿಲ್ಲ.

'ಪುನರ್ಪುಳಿ' ವಿಚಾರ ನಿಮಗೆಲ್ಲಾ ಗೊತ್ತಿರಲೇಬೇಕು. ಈಚಿನ ಒಂದೆರಡು ದಶಕಗಳಲ್ಲಿ, ಅದು 'ಕೋಕಂ' ಎಂಬ ಹೆಸರಿನಿಂದ ಖ್ಯಾತಿ ಪಡೆದಿದೆ. ನಮ್ಮೂರಿನಲ್ಲಿ ಅದನ್ನು 'ಮುರಿನ ಹಣ್ಣು' ಎಂದೇ ಕರೆಯುವುದು. ಈ ಹಣ್ಣಿನ ಮಾಂಸಲ ತಿರುಳು ಹುಳಿ-ಸಿಹಿ ರುಚಿ ಹೊಂದಿದೆ. ಅದರ ತೊಗಟೆಯನ್ನು ಒಣಗಿಸಿ, ಮಳೆಗಾಲದಲ್ಲಿ ಸಾರು ಮಾಡುವ ಪದ್ಧತಿ. ಆ ತೊಗಟೆಯಿಂದಲೇ ಕೋಕಂ ಜ್ಯೂಸ್ ಸಹ ತಯಾರಿಸಿ, ಬಾಟಲಿಗಳಲ್ಲಿಟ್ಟು ಮಾರುತ್ತಾರೆ. ಪುನರ್ಪುಳಿ ತೊಗಟೆಯು ಹಲವು ಆರೋಗ್ಯ ಸಮಸ್ಯೆಗಳಿಗೆ ಉತ್ತಮ ಪರಿಹಾರ. ಮುಖ್ಯವಾಗಿ ಹೊಟ್ಟೆಯ ಸಮಸ್ಯೆ, ಪಿತ್ತಕ್ಕೆ ಸಹಕಾರಿ ಎಂಬ ನಂಬಿಕೆ. ಇದು ಅಲರ್ಜಿಗೂ ಔಷಧವಾಗಬಲ್ಲದು ಎಂಬ ವಿಚಾರವನ್ನು ಗೆಳೆಯರೊಬ್ಬರು ಹೇಳಿದರು; ಅದರ ಜ್ಯೂಸನ್ನು ಸೇವಿಸಿ, ಇತ್ತೀಚೆಗೆ ಪ್ರಯೋಗ ಮಾಡಿ ನೋಡಿದಾಗ, ಆ ಅನಿಸಿಕೆ ಸರಿ ಎನಿಸಿತು.

ಇರಲಿ, ಈ ಮುರಿನ ಹಣ್ಣು ಅಥವಾ ಪುನರ್ಪುಳಿಯ ಬೀಜಗಳಿಂದಲೂ ಎಣ್ಣೆ ತಯಾರಿಸಬಹುದು ಎಂದು ಫೇಸ್‌ಬುಕ್ ಗೆಳೆಯರೊಬ್ಬರು ತಿಳಿಸಿದಾಗ ಅಚ್ಚರಿ ಎನಿಸಿತು. ನಮ್ಮೂರಿನಲ್ಲಿ ಅಕ್ಷರಶಃ ನೂರಾರು ಮುರಿನ ಮರಗಳಿದ್ದವು; ಬಿರು ಬೇಸಿಗೆಯಲ್ಲಿ ಮಾಗುವ ಅದರ ಹಣ್ಣುಗಳನ್ನು ತಿನ್ನುವುದು, ತೊಗಟೆಯನ್ನು ಒಣಗಿಸಿಟ್ಟುಕೊಂಡು, ಯಾವಾಗ ಬೇಕಾದರೆ ಆಗ ಸಾರು ಮಾಡುವುದು ಗೊತ್ತಿತ್ತು. ಮಂಗಗಳಿಗೆ ಈ ಹಣ್ಣು ಒಳ್ಳೆಯ ಆಹಾರ. ಕಾಡಂಚಿನಲ್ಲಿ ಬೆಳೆಯುತ್ತಾ, ರಾಶಿ ರಾಶಿ ಕಾಯಿ ಮತ್ತು ಬೀಜಗಳನ್ನು ಕೊಡುತ್ತಿದ್ದ ಈ ಮರವೂ ತೈಲವನ್ನು ನೀಡಬಲ್ಲದು ಎಂಬ ವಿಚಾರ ಕುತೂಹಲಕಾರಿ. ಜಜ್ಜಿ, ಚೆನ್ನಾಗಿ ಕುದಿಸಿದಾಗ, ಬಿಳಿ ಬಣ್ಣಕ್ಕೆ ಹೆರೆಕಟ್ಟುವ ಮುರಿನ ಎಣ್ಣೆಯು ಖಾದ್ಯ ತೈಲವೂ ಹೌದು! ಆದರೇನು ಮಾಡುವುದು, ಈಚಿನ ಮೂರು ನಾಲ್ಕು ದಶಕಗಳಲ್ಲಿ ನಮ್ಮ ಹಳ್ಳಿಯ ಸುತ್ತಮುತ್ತಲೂ ಇದ್ದ ಹಕ್ಕಲುಗಳಲ್ಲಿದ್ದ ಮುರಿನ ಮರಗಳು ಬಹುಪಾಲು ಕಣ್ಮರೆಯಾಗಿವೆ; ಅಲ್ಲೆಲ್ಲಾ ಈಗ ಬೆಳೆದುಕೊಂಡಿರುವುದು ಅಕೇಶಿಯಾ ಎಂಬ ದೈತ್ಯ ಕಳೆ ಸ್ವರೂಪಿ ಮರಗಳ ತೋಪು. ಇನ್ನುಳಿದ ಜಾಗದಲ್ಲಿ ರಬ್ಬರು ತೋಟ ನಿಧಾನವಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ. ಅಲ್ಲೆಲ್ಲಾ ಹಿಂದೆ ಇದ್ದ ಮುರಿನ ಮರ, ಕಾಡು ಮಾವಿನ ಮರ, ನೇರಳೆ ಹಣ್ಣಿನ ಮರ, ಇನ್ನೂ ಅವೆಷ್ಟೋ ಗಿಡ ಮರಗಳು ನೇಪಥ್ಯಕ್ಕೆ ಸರಿದಿವೆ.

ಕಾಡಿನ ಮರಗಳು ಬಿಡುವ ಕಾಯಿಗಳನ್ನು ಬಳಸಿ, ಖಾದ್ಯ ತೈಲ ತಯಾರಿಸುವ ವಿಚಾರಕ್ಕೆ ಬಂದಾಗ, ದೂಪದ ಎಣ್ಣೆಯ ಕುರಿತು ಹೇಳಲೇಬೇಕು. ಕಾಡಿನ ಮರಗಳಿಂದ ತಯಾರಿಸುವ ತೈಲಗಳಲ್ಲಿ ಇದು ಉತ್ಕೃಷ್ಟ ದರ್ಜೆಯದು. ಮುಂಗಾರಿನ ಆರಂಭದಲ್ಲಿ ಬಿಡುವ ದೂಪದ ಕಾಯಿಗಳನ್ನು ಜಜ್ಜಿ, ಅರೆದು, ಚೆನ್ನಾಗಿ ಬೇಯಿಸಿದಾಗ ಮೇಲೆ ತೇಲುವ ಎಣ್ಣೆಯನ್ನು ತೆಗೆದು, ಪೂರ್ತಿ ಆರುವ ಮೊದಲೇ ಕೈಯಿಂದಲೇ ಉಂಡೆ ಕಟ್ಟುತ್ತಾರೆ. ದೂರದಿಂದ ಕಂಡರೆ ಟೆನಿಸ್ ಬಾಲ್ ಸ್ವರೂಪ, ಬಾಣಲೆಗೆ ಹಾಕಿದರೆ ಕಾಲು ಲೀಟರ್ ಖಾದ್ಯತೈಲ! ಹಪ್ಪಳ, ಮುಳುಕ, ಕಜ್ಜಾಯ, ಅಪ್ಪ ಕರಿಯಲು ಉತ್ತಮ ಈ ಎಣ್ಣೆ. ದೂಪದ ಎಣ್ಣೆಯ ಕುರಿತು ಇದೇ ಅಂಕಣದಲ್ಲಿ ವಿವರವಾಗಿ ಈ ಹಿಂದೆ ಬರೆದಿರುವುದರಿಂದ, ಈಗ ಹೆಚ್ಚು ವಿವರಿಸಲು ಹೋಗುವುದಿಲ್ಲ. ದೂಪದ ಎಣ್ಣೆಯನ್ನು ನಮ್ಮ ಅಮ್ಮಮ್ಮ ಮನೆಯಲ್ಲೇ ತಯಾರಿಸಿ, ಅದರ ಉಂಡೆಗಳನ್ನು ಡಬ್ಬಿಗೆ ತುಂಬಿಸಿ ಇಡುತ್ತಿದ್ದರು! ಹಾಡಿ, ಹಕ್ಕಲುಗಳಲ್ಲಿ ಬೆಳೆಯುವ ದೂಪದ ಮರಗಳು ಬೃಹದಾಕಾರದವು; ಪ್ರತಿ ವರ್ಷ ಒಂದೊಂದು ಮರವೂ ಸಾವಿರಾರು ಕಾಯಿಗಳನ್ನು ಬಿಡುತ್ತಿತ್ತು. ಅದರಿಂದ ತಯಾರಿಸುವ ಎಣ್ಣೆಯು ನಮ್ಮ ಹಳ್ಳಿಯವರಿಗೆ ನಿಜವಾಗಿಯೂ ವಾಣಿಜ್ಯಕ ಮೌಲ್ಯದ್ದು – ಕರಿಯುವ ಎಣ್ಣೆಯನ್ನು ಖರೀದಿಸುವ ಪ್ರಮೇಯ ಇರಲಿಲ್ಲ. ನಿಧಾನವಾಗಿ ಅಂಗಡಿಗಳಲ್ಲಿ ಕುರಾಸಿನ ಎಣ್ಣೆ, ಕಡಲೆಕಾಯಿ ಎಣ್ಣೆ ದೊರೆಯಲು ಆರಂಭವಾದ ನಂತರ, ದೂಪದ ಎಣ್ಣೆಯನ್ನು ತಯಾರಿಸುವ ಪದ್ಧತಿ ನಿಂತು ಹೋಗಿದೆ. ರೂಂ ಟೆಂಪರೇಚರ್‌ನಲ್ಲಿ ಗಟ್ಟಿಯಾಗಿ, ಬಿಳೀ ಬಣ್ಣದ ಉಂಡೆಯ ಸ್ವರೂಪ ಪಡೆಯುವ ದೂಪದ ಎಣ್ಣೆಯ ಸ್ಯಾಚುರೇಟೆಡ್ ಮೌಲ್ಯದ ಕುರಿತು ವಿಜ್ಞಾನಿಗಳು ಏನೇ ಹೇಳಲಿ, ಈಗ ನಾವು ನೀವೆಲ್ಲಾ ಉಪಯೋಗಿಸುತ್ತಿರುವ ರಿಫೈನ್ಡ್ ಎಣ್ಣೆ ಅಥವಾ ಪಾಮ್ ಆಯಿಲ್ ಮಿಶ್ರಿತ ಎಣ್ಣೆಗಳಿಗಿಂತ, ದೂಪದ ಎಣ್ಣೆಯು ಉತ್ತಮ ಎಂದೇ ನನ್ನ ಅನಿಸಿಕೆ.

ಇಲ್ಲಿ ಹಂಚಿಕೊಂಡಿರುವುದು ಕೇವಲ ನಾಲ್ಕೈದು ಉದಾಹರಣೆಗಳಷ್ಟೇ! ಹೆಬ್ಬಲಸಿನ ಎಣ್ಣೆ, ದೂಪದ ಎಣ್ಣೆ, ಮುರಿನ ಎಣ್ಣೆ, ಹೊನ್ನೆಣ್ಣೆ, ಮುಳ್ಳು ಹರಳಿನ ಎಣ್ಣೆ – ಇವೆಲ್ಲವೂ ಈಗ ಮರೆಯಾಗಿರುವುದು, ಅದನ್ನು ತಯಾರಿಸುವ ವಿಧಾನವೇ ಜನಪದರ ನೆನಪಿನಿಂದ ಮಾಸಿಹೋಗಿರುವುದು, ಇವೆಲ್ಲವೂ ಒಂದು ಪರಂಪರೆಯ ನಷ್ಟ ಎನ್ನಬಹುದು, ಅಲ್ಲವೇ?

ಪ್ರಸ್ತುತ

ಕೆ.ವಿ. ಸೀತಾರಾಮಯ್ಯ, ಬೆಂಗಳೂರು

ಯಾರು ನಿರುದ್ಯೋಗಿ?

ಪದವಿಧರರಿಗೆ 3 ಸಾವಿರ ರು. ಮತ್ತು ಡಿಪ್ಲೋಮಾ ಶಿಕ್ಷಣ ಹೊಂದಿದವರಿಗೆ 1500 ರು. ನಿರುದ್ಯೋಗ ಭತ್ಯೆ ನೀಡುವುದಾಗಿ ವಿಧಾನಸಭೆ ಚುನಾವಣೆಯ ಮುನ್ನ ಕಾಂಗ್ರೆಸ್ ಗ್ಯಾರಂಟಿ ಘೋಷಿಸಿದೆ. ಕಾಂಗ್ರೆಸ್ ನಾಯಕರು ತಮ್ಮ ಆಶ್ವಾಸನೆಗೆ ಬದ್ಧರಾಗಿರುವುದಾಗಿ ಪುನರುಚ್ಚರಿಸಿದ್ದಾರೆ. ಆದರೆ, ಈಗ ಬಸ್‌ನಲ್ಲಿ ಮಹಿಳೆಯರು ಟಿಕೆಟ್ ಕೊಂಡುಕೊಳ್ಳುವುದಕ್ಕೆ ನಿರಾಕರಿಸುತ್ತಿರುವುದು ಮತ್ತು ವಿದ್ಯುತ್ ಬಿಲ್‌ಪಾವತಿಗೆ ನಿರಾಕರಿಸಿ, ಹಳ್ಳಿಗರು ವಿದ್ಯುತ್ ಕಂಪನಿಗಳ ಸಿಬ್ಬಂದಿಯ ಮೇಲೆ ಹಲ್ಲೆ ಮಾಡುತ್ತಿರುವುದು ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗುತ್ತಲೇ ಇದೆ. 'ತಾತ್ವಿಕ ಒಪ್ಪಿಗೆ ನೀಡುವುದಾಗಿ' ಚುನಾವಣೆಗೂ ಮೊದಲೇ ತಿಳಿಸಿದ್ದರೆ ಬಹುಶಃ ಮತದಾರರೂ ತಮ್ಮ ಮತಕ್ಕೆ ತಾತ್ವಿಕ ಒಪ್ಪಿಗೆಯನ್ನಷ್ಟೇ ನೀಡಿ ಇಷ್ಟ ಬಂದ ಪಕ್ಷಕ್ಕೆ ಮತ ಚಲಾಯಿಸುತ್ತಿದ್ದರೋ ಏನೋ, ಗೊತ್ತಿಲ್ಲ! ಪದವೀಧರರಿಗೆ ನಿರುದ್ಯೋಗ ಭತ್ಯೆ ಘೋಷಣೆ ಶ್ಲಾಘನೀಯ ಮತ್ತು ಅದು ಅವಶ್ಯಕವೂ ಆಗಿತ್ತು. ಏಕೆಂದರೆ ಸಂದರ್ಶನಕ್ಕೆ ಓಡಾಡುವ ಮತ್ತು ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕಾದರೂ ಉಪಯೋಗವಾದೀತು. ಇನ್ನೊಂದು ಸಂಗತಿ, ಇಂಥ ಭತ್ಯೆ ನೀಡುವ ಮೂಲಕ ಸರಕಾರ ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡುವುದು ತನ್ನಿಂದ ಅಸಾಧ್ಯ ಎಂಬ ಸಂದೇಶವನ್ನೂ ಪರೋಕ್ಷವಾಗಿ ನೀಡಿದಂತಾಗಿದೆ.

ಈ ಉಚಿತ ಟ್ರಿಕ್ ಯಶಸ್ವಿಯಾಗಿರುವುದರಿಂದ ಉತ್ತೇಜಿತವಾದ ಕಾಂಗ್ರೆಸ್ ಇದೇ ತಂತ್ರವನ್ನು ಮಧ್ಯಪ್ರದೇಶದಲ್ಲಿ ಪ್ರಯೋಗ ಮಾಡಲು ಹೊರಟಿದೆ. 100 ಯೂನಿಟ್ ವಿದ್ಯುತ್ ಉಚಿತ ಮತ್ತು 100ಕ್ಕಿಂತ ಹೆಚ್ಚಾದ ಬಳಕೆಗೆ 200 ಯೂನಿಟ್ ತನಕ ಅರ್ಧ ವಿದ್ಯುತ್ ಶುಲ್ಕ ಎಂದ ಘೋಷಿಸಲಾಗಿದೆ. ಕುಟುಂಬದ ಮಹಿಳಾ ಮುಖ್ಯಸ್ಥರಿಗೆ 1500 ರೂ. ನೀಡಲಾಗುವುದು ಎನ್ನಲಾಗುತ್ತಿದೆ. ಆದರೆ ಕಾಂಗ್ರೆಸ್ ಆಡಳಿತವಿರುವ ರಾಜಾಸ್ಥಾನ, ಹಿಮಾಚಲ ಪ್ರದೇಶ ಮತ್ತು ಛತ್ತೀಸ್‌ಘಡದಲ್ಲಿ ಇಂತಹ ಯಾವುದೇ ಉಚಿತ ಸೌಲಭ್ಯ ನೀಡಲಾಗುತ್ತಿಲ್ಲ ಏಕೆ?

ಇನ್ನು ಉದ್ಯೋಗದ ವಿಚಾರಕ್ಕೆ ಬಂದರೆ ಯಾರು ನಿರುದ್ಯೋಗಿ ಎಂಬ ಪ್ರಶ್ನೆ ಕಾಡುತ್ತದೆ. ಪದವಿ ಅಥವಾ ಡಿಪ್ಲೋಮಾ ಮುಗಿಸಿಕೊಂಡ ನಂತರ ಉದ್ಯೋಗ ದೊರಕದೆ ಹಣ ಸಂಪಾದನೆ ಮಾಡದೆ ಇರುವವರು ಅಥವಾ ಮಾಡಲು ಸಾಧ್ಯವಾಗದೇ ಕಷ್ಟಪಡುತ್ತಿರುವವರು ನಿರುದ್ಯೋಗಿ ಎಂದು ಸಾಮಾನ್ಯವಾಗಿ ಊಹಿಸಬಹುದು. ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಲ್ಲಿ ಶಿಕ್ಷಣ ಹೊಂದಿದವರು ಬಹಳಷ್ಟು ಜನ ಇದ್ದಾರೆ. ಅವರು ಮಾಡುವ ಕೆಲಸಕ್ಕೆ ಭದ್ರತೆ ಇರುವುದಿಲ್ಲ. ಒಂದು ಸಣ್ಣ ತಪ್ಪಿಗೂ ಅವರುಗಳನ್ನು ಕೆಲಸದಿಂದ ತೆಗೆದು ಹಾಕಬಹುದು. ಕೆಲಸ ಭದ್ರತೆ ಹೊಂದದ ಖಾಸಗಿ ಸಂಸ್ಥೆಯ ಉದ್ಯೋಗಿಗಳನ್ನೂ ನಿರುದ್ಯೋಗಿ ಎಂದೇ ಪರಿಗಣಿಸಬೇಕಾಗುತ್ತದೆ. ಕೆಲವೊಮ್ಮೆ ನಿರುದ್ಯೋಗ ಭತ್ಯೆ ಅನರ್ಹರ ಪಾಲಾಗುವ ಸಾಧ್ಯವೂ ಇರುತ್ತದೆ. ದೊಡ್ಡ ದೊಡ್ಡ ವ್ಯಾಪಾರೋದ್ಯಮ ಮಾಡುವಂತಹ ಮಕ್ಕಳು ಆ ಉದ್ಯಮದಲ್ಲಿ ತೊಡಗಿಸಿಕೊಂಡು ಒಳ್ಳೆಯ ಆದಾಯವನ್ನು ಪಡೆ ಯುತ್ತಿರುತ್ತಾರೆ. ಆದರೆ ಸರಕಾರದ ದೃಷ್ಟಿಯಲ್ಲಿ ಅವರು ನಿರು ದ್ಯೋಗಿಗಳಾಗಿ ಕಾಣುತ್ತಾರೆ. ನಿರುದ್ಯೋಗಿ ಎಂಬ ಕಾರಣಕ್ಕೆ ಅವರಿಗೂ ನಿರುದ್ಯೋಗ ಭತ್ಯೆ ನೀಡಬೇಕಾಗುತ್ತದೆ. ನಿಜಕ್ಕೂ ಉದ್ಯೋಗದ ಅವಶ್ಯಕತೆ ಇದ್ದು ನಿರುದ್ಯೋಗಿಗಳಾಗಿಯೇ ಇರುವವರು ಎಂದೆಂದಿಗೂ ಸರಕಾರ ನೀಡುವ 3000 ರೂ. ಮತ್ತು 1500 ರೂ. ಗಳಿಗೆ ನಿರುದ್ಯೋಗಿಗಳಾಗಿಯೇ ಉಳಿಯಲು ಇಷ್ಟಪಡುವುದಿಲ್ಲ. ಹಾಗಿದ್ದರೆ ಅವರ ಆರ್ಥಿಕ ಪರಿಸ್ಥಿತಿ ಎಂದಿಗೂ ಸುಧಾರಿಸುವುದಿಲ್ಲ. ಅಲ್ಲದೆ ಈ ಮೊಬಲಗಿಗೆ 5-10 ವರ್ಷ ಬಿಡಿ, ಇನ್ನೆರಡು ವರ್ಷಗಳ ನಂತರವೂ ಈಗಿನ ಮೌಲ್ಯ ಇರುವುದಿಲ್ಲ.

ಇಂಥದ್ದರ ಬದಲಿಗೆ ಈಗ ಸರಕಾರದಲ್ಲಿರುವ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಜತೆಗೆ ದಿನಗಳು ಕಳೆದಂತೆ ಜನಸಂಖ್ಯೆಗನುಗುಣವಾಗಿ ಸರಕಾರದಿಂದ ಜನರಿಗೆ ಹೆಚ್ಚಿನ ಸೇವೆಯ ಅಗತ್ಯವೂ ಹೆಚ್ಚಾಗುತ್ತಿರುವ ಪ್ರಯುಕ್ತ ಹೆಚ್ಚಿನ ಹುದ್ದೆಗಳನ್ನು ಸೃಷ್ಟಿಸಬೇಕಾಗುತ್ತದೆ. ಖಾಸಗಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಉದ್ಯೋಗ ಭದ್ರತೆ ನಿರ್ಮಾಣವಾದರೆ ನಿರುದ್ಯೋಗ ಸಮಸ್ಯೆ ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಪೇಮೆಂಟ್ ಆಫ್ ವೇಜಸ್ ಕಾಯಿದೆ ಮತ್ತು ಮಿನಿಮಂ ವೇಜಸ್ ಕಾಯಿದೆ ಇದ್ದರೂ ನಿಯಮ ಪಾಲನೆಯಾಗುತ್ತಿಲ್ಲ; ಎಲ್ಲೆಡೆ ಅನ್ವಯವಾಗುತ್ತಿಲ್ಲ. ಇವೆಲ್ಲ ಕ್ರಮಗಳಾದರೆ ತನ್ನಿಂದ ತಾನೇ ನಿರುದ್ಯೋಗ ಸಮಸ್ಯೆ ನಿವಾರಣೆ ಆಗಿ, ಉಚಿತ ಸೌಲಭ್ಯಗಳನ್ನು ನೀಡುವ ಪ್ರಮೇಯವೇ ಬರುವುದಿಲ್ಲ. ಪರೀಕ್ಷಾ ಫಲಿತಾಂಶ ಹೊರಬಂದ ನಂತರ ನಿರುದ್ಯೋಗ ಭತ್ಯೆ ನೀಡಲು ಕೂಲಿಂಗ್ ಪಿರಿಯಡ್ ನಿಗದಿಪಡಿಸಬೇಕು. ಕೂಲಿಂಗ್ ಪಿರಿಯಡ್ ಕಳೆದ ನಂತರ ಭತ್ಯೆ ಪಾವತಿ ಮಾಡಬೇಕು. ಭತ್ಯೆ ನೀಡುವ ಉದ್ದೇಶಕ್ಕೆ ಪದವಿ ಎಂದರೆ ಸ್ನಾತಕೋತ್ತರ ಪದವಿ ಪಡೆದವರಿಗೂ ಅರ್ಹತೆ ನೀಡಬೇಕು. ಕನಿಷ್ಠ ಪಕ್ಷ ಪದವಿಧರರಿಗೆ ನೀಡುವಂತೆ 3000 ರೂ. ನೀಡಬೇಕು. ಪ್ರಮುಖವಾಗಿ ಉದ್ಯೋಗ ಸೃಷ್ಟಿಗೆ ಆದ್ಯತೆಯನ್ನು ನೀಡುವುದು ಸರ್ಕಾರದ ಕರ್ತವ್ಯ. ಏಕೆಂದರೆ ಉದ್ಯೋಗ ಭತ್ಯೆ ನಿರುದ್ಯೋಗಿಗಳಿಗೆ ಶಾಶ್ವತ ಪರಿಹಾರವಲ್ಲ.

ಅಷ್ಟಕ್ಕೂ ಮೋದಿ ಕಾಲಿಗೆ ಅಲ್ಲಿನ ಪ್ರಧಾನಿ ಬಿದ್ದಿದ್ದೇಕೆ?

ಚೀನಾದ ಕಣ್ಣು ಪಪುವಾ ನ್ಯೂಗಿನಿಯಾದಲ್ಲಿ ಪತ್ತೆಯಾಗಿದ್ದ ಚಿನ್ನದ ನಿಕ್ಷೇಪ, ಖನಿಜ ಸಂಪತ್ತುಗಳ ಮೇಲೆ ಬಿದ್ದ ಮೇಲೆ ಚೀನಾ ಪಪುವಾ ನ್ಯೂಗಿನಿಯಕ್ಕೆ ಮತ್ತಷ್ಟು ಹತ್ತಿರವಾಯಿತು. ಇದರಿಂದಾಗಿ ಉಭಯ ದೇಶಗಳು ಅನೇಕ ದ್ವಿಪಕ್ಷಿಯ ಒಪ್ಪಂದಗಳಿಗೆ ಒಳಗಾದವು. ಚೀನಾ ಸಹ ಅನೇಕ ಹೂಡಿಕೆಗಳನ್ನು ಪಪುವಾ ನ್ಯೂಗಿನಿಯಾದಲ್ಲಿ ಮಾಡಿತು.

ಅಭಿವ್ಯಕ್ತ
ಮಾರುತೀಶ್ ಅಗ್ರಾರ
vveditoped@gmail.com

ಬಹುಶಃ ಭಾರತದಲ್ಲಿ ಮೋದಿಯವರಷ್ಟು ಟೀಕೆ, ನಿಂದನೆಗಳನ್ನು ಎದುರಿಸಿದ ಮತ್ತೊಬ್ಬ ನಾಯಕ ಹುಡುಕಿದರೂ ಸಿಗಲಾರ! ಯಾಕೆಂದರೆ ಭಾರತದಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ವಿರೋಧಿಸುವ ಬಹುದೊಡ್ಡ ಪಡೆಯೇ ಇದೆ. ಈ ಕಾರಣಕ್ಕಾದರೂ ಮೋದಿ ವಿರೋಧಿಗಳು ಖುಷಿ ಪಡಬಹುದು.

ಬಿಡಿ ಭಾರತದಲ್ಲಿ ಇದೆಲ್ಲ ಇದ್ದದ್ದೇ. ಆದರೆ, ಜಾಗತಿಕವಾಗಿ ಮೋದಿಯವರ ಜನಪ್ರಿಯತೆ ಯಾವ ಮಟ್ಟಕ್ಕೆ ತಲುಪಿದೆಯೆಂದರೆ ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅವರೇ ಖುದ್ದು, ಮೋದಿಯವರೇ ನನಗೆ ನಿಮ್ಮ ಆಟೋಗ್ರಾಫ್ ಬೇಕು ಎಂದು ಕೇಳುವ ಹಂತಕ್ಕೆ ಮೋದಿಯವರ ಇಮೇಜ್ ವೃದ್ಧಿಸಿದೆ! ಇಷ್ಟೇ ಅಲ್ಲ ಆಸ್ಟ್ರೇಲಿಯಾ ಪ್ರಧಾನಿ ತಮ್ಮ ನೆಲದಲ್ಲೇ ನಿಂತು 'ಮೋದಿ ಬಾಸ್' ಎನ್ನುತ್ತಾರೆ. ಇದೆಲ್ಲವುದಕ್ಕಿಂತ ಭಾವನಾತ್ಮಕ ಘಟನೆಯೆಂದರೆ ಪಪುವಾ ನ್ಯೂಗಿನಿಯಾ ಪ್ರಧಾನಿಯೊಬ್ಬರು ಭಾರತದ ಪ್ರಧಾನಮಂತ್ರಿ ನರೇಂದ್ರಮೋದಿಯವರ ಕಾಲಿಗೆರಗಿ ನಮಸ್ಕರಿಸುವುದನ್ನು ನೋಡಿದಾಗ ಭಾರತವನ್ನು ವಿಶ್ವಸಮುದಾಯ ಇಂದು ಯಾವ ರೀತಿ ಕಾಣುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇದೆಲ್ಲವೂ ನಡೆದಿರುವುದು ಜಿ7 ಶೃಂಗಸಭೆ ಸೇರಿದಂತೆ ನರೇಂದ್ರ ಮೋದಿಯವರ ಆರು ದಿನಗಳ ಈ ವಿದೇಶ ಪ್ರವಾಸದಲ್ಲಿ. ಈ ಸಂಗತಿಗಳು ನಿಜಕ್ಕೂ ಭಾರತೀಯರಿಗೆ ಹೆಮ್ಮೆ ತರುವಂತಹದ್ದು.

ಆದರೆ ಇಲ್ಲಿ ಹೇಳಬೇಕಾಗಿರುವ ವಿಷಯ ಇದಲ್ಲ. ಜಪಾನ್, ಪಪುವಾ, ನ್ಯೂಗಿನಿಯಾ ಹಾಗೂ ಆಸ್ಟ್ರೇಲಿಯಾ ಪ್ರವಾಸದಲ್ಲಿ ಮೋದಿಯವರು ಜಾಗತಿಕವಾಗಿ ಅನೇಕ ವಿಚಾರಗಳ ಕುರಿತು ಮಾತನಾಡಿದ್ದಾರೆ ಹಾಗೂ ಚೀನಾವನ್ನು ಪರೋಕ್ಷವಾಗಿ ಕುಟುಕಿದ್ದಾರೆ. ಜತೆಗೆ ಮೋದಿಯವರು ವಿಶ್ವಸಂಸ್ಥೆಯ ಸುಧಾರಣೆಯ ಬಗ್ಗೆ ಮಾತನಾಡುತ್ತ, ವಿಶ್ವಸಂಸ್ಥೆಯ ಸ್ಥಾಪನೆ ಉದ್ದೇಶ ಈಡೇರಿದೆಯೇ? ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ. ಭಯೋತ್ಪಾದಕರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರದಲ್ಲಿ ವಿಶ್ವಸಂಸ್ಥೆ ಭದ್ರತಾ ಮಂಡಳಿ ಇಂದಿಗೂ ದೃಢ ನಿರ್ಧಾರ ಕೈಗೊಳ್ಳುವಲ್ಲಿ ವಿಫಲವಾಗಿದೆ. ಹಾಗಾಗಿ ವಿಶ್ವಸಂಸ್ಥೆ ಭದ್ರತಾ ಮಂಡಳಿಯೂ 21ನೇ ಶತಮಾನದ ಕಾಲಕ್ಕೆ ತಕ್ಕಂತೆ ನಿರ್ಣಯಗಳನ್ನು ಬದಲಾಯಿಸಿಕೊಳ್ಳಬೇಕಾಗಿದೆ ಎಂದು ಮೋದಿ ವಿಶ್ವಸಂಸ್ಥೆ ಭದ್ರತಾ ಮಂಡಳಿಗೆ ಜಪಾನಿನ ಹಿರೋಶಿಮಾದಲ್ಲಿ ನಿಂತು ಸಲಹೆ ನೀಡಿದ್ದಾರೆ.

ಇದು ಉಗ್ರರಿಗೆ ಬೆನ್ನೆಲುಬಾಗಿ ನಿಂತಿರುವ ಪಾಕಿಸ್ತಾನಕ್ಕೆ ಪರೋಕ್ಷವಾಗಿ ಕೊಟ್ಟ ಛಡಿ ಏಟು ಎಂದು ವಿಶ್ಲೇಷಿಸಲಾಗುತ್ತಿದೆ. ಯಾಕೆಂದರೆ ಕಾಶ್ಮೀರದಲ್ಲಿ ನಡೆಯುತ್ತಿರುವ ಜಿ20 ಕಾರ್ಯಕಾರಿ ಸಭೆ ಮೇಲೆ ಉಗ್ರರ ಕರಿನೆರಳು ಬಿದ್ದಿತ್ತು. ಏನಾದರೂ ಕಿತಾಪತಿ ಮಾಡಿ ಕಾಶ್ಮೀರದ ಸಭೆಯನ್ನು ರದ್ದುಗೊಳಿಸಬೇಕೆಂದು ಹೊಂಚು ಹಾಕಿದ್ದ ಪಾಕಿಸ್ತಾನ, ಉಗ್ರರ ಮೂಲಕ ಅದನ್ನು ಸಾಧಿಸಲು ಹೊರಟಿತ್ತು. ಆದರೆ, ಪಾಕಿಸ್ತಾನದ ಯಾವ ಗೊಡ್ಡು ಬೆದರಿಕೆಗೂ ಬಗ್ಗದ ಭಾರತ ಕಾಶ್ಮೀರದಲ್ಲಿ ಜಿ20 ಸಭೆಯನ್ನು ಮಾಡಿಯೇ ಸಿದ್ಧ ಎಂದು ದಿಟ್ಟ ಹೆಜ್ಜೆಯನ್ನಿಟ್ಟಿದೆ. ಪಾಕಿಸ್ತಾನ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿ ದೂರ ಉಳಿಯಿತು. ಚೀನಾ ಕೂಡ ಪಾಕಿಸ್ತಾನ ಬೇಜಾರು ಮಾಡಿಕೊಳ್ಳುತ್ತೆ ಎಂಬ ಕಾರಣಕ್ಕೆ ಸಭೆಯಿಂದ ಹಿಂದೆ ಸರಿಯಿತು. ಈ ಹಿಂದೆ ಅರುಣಾಚಲ ಪ್ರದೇಶದಲ್ಲಿ ನಡೆದಿದ್ದ ಜಿ20 ಕಾರ್ಯಕಾರಿ ಸಭೆಯಿಂದಲೂ ಚೀನಾ ಅಂತರ ಕಾಯ್ದುಕೊಂಡಿತ್ತು. ಇಂಥ ಸನ್ನಿವೇಶದಲ್ಲೇ ಮೋದಿಯವರು ಪಾಕಿಸ್ತಾನ ಪ್ರೇರಿತ ಭಯೋತ್ಪಾದಕರ ವಿಚಾರವನ್ನು ಜಿ7 ಶೃಂಗಸಭೆಯ ಮೂಲಕ ವಿಶ್ವಸಂಸ್ಥೆಗೆ ಮತ್ತೊಮ್ಮೆ ಮನದಟ್ಟು ಮಾಡಿದರು. ಅಲ್ಲಿಗೆ ಕಾಶ್ಮೀರದ ಸಭೆಯನ್ನು ಉಗ್ರರ ದಾಳಿಯಿಂದ ಧ್ವಂಸಗೊಳಿಸಿ ಭಾರತದ ವರ್ಚಸ್ಸನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾಳುಮಾಡಬೇಕೆಂದು ಕೊಂಡಿದ್ದ ಪಾಕಿಸ್ತಾನದ ಕನಸನ್ನು ಮೋದಿ ಧ್ವಂಸಗೊಳಿಸಿ ಬಿಟ್ಟರು!

ಇನ್ನು ಹಿರೋಶಿಮಾದಲ್ಲಿ ನಡೆದ ಜಿ7 ಶೃಂಗಸಭೆಯ ನಂತರ ಮೋದಿ ಹೊರಟಿದ್ದು ದ್ವೀಪ ರಾಷ್ಟ್ರ ಪಪುವಾ ನ್ಯೂಗಿನಿಯಾ ಕಡೆ. ಇದು ಭಾರತದ ಪ್ರಧಾನಿಯೊಬ್ಬರು ಮೊದಲ ಬಾರಿಗೆ ಆ ದ್ವೀಪ ರಾಷ್ಟ್ರಕ್ಕೆ ಕಾಲಿಟ್ಟ ಐತಿಹಾಸಿಕ ಕ್ಷಣಕ್ಕೆ ಮೋದಿ ಸಾಕ್ಷಿಯಾದರು. ಸ್ವತಃ ಅಲ್ಲಿನ ಪ್ರಧಾನಿ ಜೇಮ್ಸ್ ಮರಾಪೆ ಅವರೇ ತಮ್ಮ ಶಿಷ್ಟಚಾರಗಳನ್ನೆಲ್ಲ ಬದಿಗೊತ್ತಿ ಮೋದಿಯವರ ಸ್ವಾಗತಕ್ಕೆ ತುದಿಗಾಲಿನಲ್ಲಿ ನಿಂತಿದ್ದರಲ್ಲದೇ ಸ್ವತಃ ಮೋದಿಯವರ ಕಾಲಿಗೆ ನಮಸ್ಕರಿಸಿ ಅವರನ್ನು ಆತ್ಮೀಯವಾಗಿ ನ್ಯೂಗಿನಿಯಾಕ್ಕೆ ಬರಮಾಡಿಕೊಂಡ ದೃಶ್ಯವಂತೂ ಸೋಷಿಯಲ್ ಮೀಡಿಯಾಗಳಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿತ್ತು. ಅಷ್ಟಕ್ಕೂ ಪಪುವಾ ನ್ಯೂಗಿನಿಯಾ ಭಾರತ ದೇಶದ ಪ್ರಧಾನಿಯೊಬ್ಬರಿಗೆ ಈ ಪರಿಯ ಗೌರವ ಕೊಡುವುದಕ್ಕೆ ಕಾರಣವೇನು? ಒಂದು ದೇಶದ ಪ್ರಧಾನಿ ಮತ್ತೊಂದು ದೇಶದ ಪ್ರಧಾನಿಯವರ ಕಾಲಿಗೆರಗಿ ನಮಸ್ಕರಿಸುವ ದೃಶ್ಯ ಅನೇಕರನ್ನು ಹುಬ್ಬೇರಿಸುವಂತೆ ಮಾಡಿದೆ. ಆದರೆ ಅದಕ್ಕೂಂದು ಕಾರಣವೂ ಇದೆ. ಕರೋನಾ ಮಹಾಮಾರಿ ಇಡೀ ಜಗತ್ತನ್ನು ಆವರಿಸಿಕೊಂಡು ಲಕ್ಷಾಂತರ ಜನರ ಸಾವು-ನೋವುಗಳಿಗೆ ಜಾಗತಿಕ ಸಮುದಾಯ ತುತ್ತಾಗಿತ್ತಲ್ಲ, ಅದರಲ್ಲಿ ಈ ಪಪುವಾ ನ್ಯೂಗಿನಿಯಾ ಎನ್ನುವ ದ್ವೀಪ ರಾಷ್ಟ್ರ ಕೂಡ ಒಂದು. ಕರೋನಾ ಸೋಂಕು ವ್ಯಾಪಕವಾಗಿ ಹರಡಿದ ಸಮಯದಲ್ಲಿ ಅನೇಕ ಬಡ ರಾಷ್ಟ್ರಗಳು ಕೋವಿಡ್ ಲಸಿಕೆ ತಯಾರಿಸುವ ದೇಶಗಳ ಮುಂದೆ ಲಸಿಕೆಗಾಗಿ ಕೈಚಾಚಿ, ದುಂಬಾಲು ಬಿದ್ದಿದ್ದವು. ಪಪುವಾ ನ್ಯೂಗಿನಿಯಾ ಕೂಡ ಚೀನ ಅಮೆರಿಕ, ರಷ್ಯಾ, ಬ್ರಿಟನ್ ಸೇರಿದಂತೆ ಅನೇಕ ರಾಷ್ಟ್ರಗಳೆದುರು ಕೇಳಿಕೊಂಡಿತ್ತು. ಆದರೆ ಯಾರೂ ಲಸಿಕೆ ಕೊಡಲಿಲ್ಲ. ಭಾರತ ಮಾತ್ರ ಹೆಚ್ಚೂ ಕಡಿಮೆ 1.5 ಲಕ್ಷ ಕೋವಿಡ್ ಲಸಿಕೆಯನ್ನು ಕೊಟ್ಟು ಮಾನವೀಯತೆ ಪ್ರದರ್ಶಿಸಿತ್ತು. ಆ ಸಂಕಷ್ಟಮಯ ಸನ್ನಿವೇಶದಲ್ಲಿ ಭಾರತ ಸಹಾಯ ಹಸ್ತ ಮಾಡಿದ್ದಕ್ಕಾಗಿ ಲಕ್ಷಾಂತರ ಪಪುವಾ ನ್ಯೂಗಿನಿಯಾ ಜನರು ಕೊರೊನಾ ಸೋಂಕಿನಿಂದ ಪಾರಾಗಿದ್ದರು. ಅದರ ಅಭಿಮಾನದ ಸಂಕೇತವಾಗಿ ಇಂದು ಪಪುವಾ ನ್ಯೂಗಿನಿಯಾದ ಸರಕಾರ ಈ ರೀತಿ ಕೃತಜ್ಞತೆ ಸಲ್ಲಿಸಿದೆ. ಭಾರತಕ್ಕೆ ಇದಕ್ಕಿಂತ ಗೌರವ ಇನ್ನೇನು ಬೇಕು ಅಲ್ವಾ?

ಇನ್ನು ಪಪುವಾ ನ್ಯೂಗಿನಿಯಾ ದೇಶ ಮೊದಲಿನಿಂದಲೂ ಅನೇಕ ವಿಚಾರಗಳಿಗೆ ಚೀನಾದ ಮೇಲೆ ಹೆಚ್ಚು ಅವಲಂಬಿತವಾಗಿದ್ದ ದ್ವೀಪ ರಾಷ್ಟ್ರ. ಚೀನಾದ ಕಣ್ಣು ಪಪುವಾ ನ್ಯೂಗಿನಿಯಾದಲ್ಲಿ ಪತ್ತೆಯಾಗಿದ್ದ ಚಿನ್ನದ ನಿಕ್ಷೇಪ, ಖನಿಜ ಸಂಪತ್ತುಗಳ ಮೇಲೆ ಬಿದ್ದ ಮೇಲೆ ಚೀನಾ ಪಪುವಾ ನ್ಯೂಗಿನಿಯಕ್ಕೆ ಮತ್ತಷ್ಟು ಹತ್ತಿರವಾಯಿತು. ಇದರಿಂದಾಗಿ ಉಭಯ ದೇಶಗಳು ಅನೇಕ ದ್ವಿಪಕ್ಷಿಯ ಒಪ್ಪಂದಗಳಿಗೆ ಒಳಗಾದವು. ಚೀನಾ ಸಹ ಅನೇಕ ಹೂಡಿಕೆಗಳನ್ನು ಪಪುವಾ ನ್ಯೂಗಿನಿಯಾದಲ್ಲಿ ಮಾಡಿತು. ಇದರಿಂದಾಗಿ ಚೀನಾ ತನ್ನನ್ನು ತಾನು ವಿಶ್ವ ದಕ್ಷಿಣದ ಬಲಾಢ್ಯ ದೇಶವೆಂದು ಬಿಂಬಿಸಿಕೊಳ್ಳುತ್ತ ಪಪುವಾ ನ್ಯೂಗಿನಿಯಾ ಸೇರಿದಂತೆ 14 ಪೆಸಿಫಿಕ್ ದ್ವೀಪ ರಾಷ್ಟ್ರಗಳ ಮೇಲೆ ವ್ಯಾವಹಾರಿಕ ಹಿಡಿತ ಸಾಧಿಸಿತು. ಸಾಲದ್ದಕ್ಕೆ ಅನೇಕ ದಶಕಗಳಿಂದ ಇಡೀ ದಕ್ಷಿಣ ಸಮುದ್ರವೇ ತನ್ನದೆಂದು ಕರೆದುಕೊಳ್ಳುತ್ತ ಅದರ ಮೇಲೆ ಹಿಡಿತ ಸಾಧಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತಿರುವುದು ಗುಟ್ಟಾಗೇನೂ ಉಳಿದಿಲ್ಲ. ಹೀಗಾಗಿ ಅಗತ್ಯ ಬಿದ್ದಾಗ ಪೆಸಿಫಿಕ್ ದ್ವೀಪರಾಷ್ಟ್ರಗಳು ತನ್ನ ನೆರವಿಗೆ ನಿಲ್ಲಲಿ ಎನ್ನುವ ದುರುದ್ದೇಶದಿಂದ ಚೀನಾ ರಾಜತಾಂತ್ರಿಕ ನೆರವು, ಆರ್ಥಿಕ ಸಹಕಾರ ಮಾಡುವ ನೆಪದಲ್ಲಿ ಆ ರಾಷ್ಟ್ರಗಳ ಮೇಲೆ ತನ್ನ ಕಬಂಧ ಬಾಹುಗಳನ್ನು ಚಾಚಿದೆ. ಇದರ ಜತೆಗೆ ಚೀನಾ, ಭಾರತ ಮತ್ತು ಇತರೆ ಅನೇಕ ದೇಶಗಳೊಂದಿಗೆ ತನ್ನ ಗಡಿ ಹಂಚಿಕೊಂಡಿದ್ದು ಗಡಿ ಸುತ್ತಮುತ್ತಲಿನ ಪ್ರದೇಶಗಳ ಭೂ-ಭಾಗಗಳನ್ನು ತನ್ನದೆಂದು ಸದಾ ಒಂದಿಲ್ಲೊಂದು ತಕರಾರು ತೆಗೆದು ಗಡಿ ಪ್ರದೇಶಗಳಲ್ಲಿ ಯುದ್ಧೋನ್ಮಾದ ಸೃಷ್ಟಿಸುವುದು ಚೀನಾದ ಕುತಂತ್ರಗಳಲ್ಲಿ ಒಂದು. ಇದರಿಂದಾಗಿ ಚೀನಾದ ಜತೆ ಗಡಿ ಹಂಚಿಕೊಂಡಿರುವ ಸಣ್ಣಪುಟ್ಟ ರಾಷ್ಟ್ರಗಳು ರೋಸಿ ಹೋಗಿವೆ.

ತೈವಾನ್ ಸ್ವತಂತ್ರ ರಾಷ್ಟ್ರವೆಂದು ಘೋಷಿಸಿಕೊಂಡಿದ್ದರು ಚೀನಾ ಮಾತ್ರ ತೈವಾನ್ ತಮಗೆ ಸೇರಿದ್ದು ಎಂದು ವಾದಿಸುತ್ತಲೇ ಸದಾ ಕಾಲವೂ ಅಲ್ಲಿ ಯುದ್ಧದ ವಾತಾವರಣವನ್ನು ಚೀನಾ ಸೃಷ್ಟಿಸುತ್ತಿದೆ. ನಮ್ಮ ಅರುಣಾಚಲ ಪ್ರದೇಶಗಳಲ್ಲಿನ ಅನೇಕ ಜಾಗಗಳನ್ನು ತನ್ನದೆಂದು ಹೇಳಿಕೊಳ್ಳುವ ಚೀನಾ ಅನೇಕ ಬಾರಿ ಭಾರತದ ಜತೆಗೆ ಕಾಲು ಕೆರೆದುಕೊಂಡು ಜಗಳಕ್ಕೆ ಬಂದು ನಂತರ ಸುಮ್ಮನಾಗಿದೆ. ದಕ್ಷಿಣ ಸಮುದ್ರದಲ್ಲಿ ಒಂದಿಲ್ಲೊಂದು ನೆಪವೊಡ್ಡಿ ತನ್ನ ನೌಕಾಸೇನೆಯನ್ನು ಆಯೋಜಿಸುವ ಮೂಲಕ ಇಡೀ ದಕ್ಷಿಣ ಸಮುದ್ರವನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನವನ್ನು ದಶಕಗಳಿಂದ ಮಾಡುತ್ತಲೇ ಬರುತ್ತಿದೆ. ಈಗ ಪ್ರಧಾನಿ ನರೇಂದ್ರ ಮೋದಿಯವರು ಪೆಸಿಫಿಕ್ ದ್ವೀಪ ರಾಷ್ಟ್ರಗಳ ಸಹಕಾರ ಒಕ್ಕೂಟದ ಸಭೆಯಲ್ಲಿ ನಿಂತು, 'ಪೆಸಿಫಿಕ್ ದ್ವೀಪ ರಾಷ್ಟ್ರಗಳು ಸಂಕಷ್ಟದಲ್ಲಿದ್ದಾಗ ನಂಬಿದವರು ಯಾರು ಕೂಡ ಅವರ ನೆರವಿಗೆ ಬರಲಿಲ್ಲ' ಎನ್ನುವ ಮೂಲಕ ಚೀನಾಗೆ ಮಾತಿನಲ್ಲೇ ತಿವಿದಿದ್ದಾರೆ. ಇದರ ಜತೆಗೆ ಪಪುವಾ ನ್ಯೂಗಿನಿಯಾ ಪ್ರಧಾನಿ ಜೇಮ್ಸ್ ಮರಾಪೆ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿ, ವ್ಯಾಪಾರ, ಹೂಡಿಕೆ, ತಂತ್ರಜ್ಞಾನ, ಆರೋಗ್ಯ, ಕೌಶಲ್ಯಾಭಿವೃದ್ಧಿ, ಐಟಿ ಕ್ಷೇತ್ರಗಳ ಪಾಲುದಾರಿಕೆಯನ್ನು ಬಲಪಡಿಸುವ ಕುರಿತಂತೆ ಸಾಕಷ್ಟು ಚರ್ಚೆಗಳನ್ನು ಮೋದಿಯವರು ಮಾಡಿದ್ದಾರೆ ಎನ್ನಲಾಗುತ್ತಿದೆ.

ಜಾಗತಿಕ ವೇದಿಕೆಗಳಲ್ಲಿ ಭಾರತ ಇಂದು ದೈತ್ಯ ಶಕ್ತಿಯಾಗಿ ಬೆಳೆದು ನಿಂತಿದೆ. ಹಾಗೂ ವಿಶ್ವದ ದಕ್ಷಿಣ ದ್ವೀಪ ರಾಷ್ಟ್ರಗಳ ಪರ ಧ್ವನಿಯಾಗಿರುವುದು ನಮಗೆ ಸಾಕಷ್ಟು ಬಲ ಬಂದಂತಾಗಿದೆ ಎಂದು ಮರಾಪೆ ಹೇಳಿರುವುದು ಚೀನಾದ ಪಿತ್ತವನ್ನು ನೆತ್ತಿಗೇರಿಸಿದೆ. ಯಾಕೆಂದರೆ ಇತ್ತೀಚೆಗಂತೂ ಚೀನಾ ನಿಯಂತ್ರಣ ಸಾಧಿಸಿದ ಕಡೆಯಲ್ಲೆಲ್ಲ ಭಾರತ ತನ್ನ ಪ್ರಭುತ್ವವನ್ನು ಸ್ಥಾಪಿಸುತ್ತ ಚೀನಾಗೆ ಸವಾಲೊಡ್ಡುತ್ತಿದೆ. ಜತೆಗೆ ಭಾರತ ಜಾಗತಿಕವಾಗಿ ಬಲಾಢ್ಯ ಶಕ್ತಿಯಾಗಿ ಬೆಳೆಯುತ್ತಿರುವುದನ್ನು ಸಹಿಸದ ಚೀನಾ ಒಳಗೊಳಗೆ ಭಾರತದ ವಿರುದ್ಧ ನಿಗಿನಿಗಿ ಕೆಂಡ ಕಾರುತ್ತಿದೆ. ಸಾಲದ್ದಕ್ಕೆ ಪಪುವಾ ನ್ಯೂಗಿನಿಯಾ ಸರಕಾರ ಪ್ರಧಾನಿ ಮೋದಿಯವರಿಗೆ ತನ್ನ ಅತ್ಯುನ್ನತ ಪ್ರಶಸ್ತಿಯಾದ 'ಕಂಪ್ಯಾನಿಯನ್ ಆಫ್ ದಿ ಆರ್ಡರ್ ಆಫ್ ಲೊಗ್ಹೊ' ಪುರಸ್ಕಾರ ನೀಡಿ ಗೌರವಿಸಿದೆ. ಮತ್ತೊಂದು ದ್ವೀಪ ರಾಷ್ಟ್ರ ಫಿಜಿ ಸಹ ತಮ್ಮ ದೇಶದ ಅತ್ಯುನ್ನತ ಗೌರವವಾದ 'ಕಂಪ್ಯಾನಿಯನ್ ಆಫ್ ದಿ ಆರ್ಡರ್ ಫಿಜಿ' ಪದಕ ನೀಡಿ ಗೌರವಿಸಿದೆ. ಹಾಗಾಗಿ ಸದಾ ಕಾಲ ಭಾರತದ ವಿರುದ್ಧ ಕತ್ತಿ ಮಸೆಯುವ ಡ್ರ್ಯಾಗನ್ ದೇಶಕ್ಕೆ ಪೆಸಿಫಿಕ್ ದ್ವೀಪ ರಾಷ್ಟ್ರಗಳಲ್ಲಿ ಭಾರತಕ್ಕೆ ಸಿಕ್ಕಿರುವ ಗೌರವ, ಸಹಕಾರ ಆ ದೇಶದ ನಿದ್ದೆಗೆಡಿಸಿದೆ!



ನಾರದ ಸಂಚಾರ

ಅಭ್ಯಾಗತ
abhyagatha@yahoo.co.in

ಕಾರಂತರು ಒಂದೊಮ್ಮೆ ಗೆದ್ದಿದ್ದರೆ...

ರಾಜ್ಯ ವಿಧಾನಸಭೆಯ ಸಭಾಧ್ಯಕ್ಷರಾಗಿ ಮಂಗಳೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಯು.ಟಿ. ಖಾದರ್ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಆಡಳಿತ ಪಕ್ಷದ ಪರವಾಗಿ ಖಾದರ್ ಉಮೇದುವಾರಿಕೆ ಸಲ್ಲಿಸಿದಾಗ ಪ್ರತಿಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳನ್ನು ಹಾಕದ ಕಾರಣ ಖಾದರ್ ಅವರು ಅವಿರೋಧವಾಗಿ ಆಯ್ಕೆಯಾಗುವಂತಾಯಿತು. ಅವರಿಗೆ ಒಳ್ಳೆಯದಾಗಲಿ, ಅವರಿಂದ ಒಳ್ಳೆಯ ಕೆಲಸಗಳಾಗಲಿ ಎಂದು ಹಾರೈಸೋಣ, ಆಶಿಸೋಣ.



ಈ ಸಂದರ್ಭವು ಬೇಡಬೇಡವೆಂದರೂ ನಾರದರನ್ನು ಒಂದು ಫ್ಲ್ಯಾಷ್‌ಬ್ಯಾಕ್‌ಗೆ ಒಯ್ಯುತ್ತಿದೆ. ಸಾಹಿತಿ ಶಿವರಾಮ ಕಾರಂತರು 1989ರಲ್ಲಿ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಕೈಗಾ ಅಣುಸ್ಥಾವರ ವಿರೋಧಿ ಹೋರಾಟ ಜಿಲ್ಲೆಯಲ್ಲಿ ಕಾವು ಪಡೆದಿದ್ದ ಕಾರಣಕ್ಕೆ ಹೋರಾಟಗಾರರ ದನಿಯಾಗಿ ಕಾರಂತರು ಆಗ ಸ್ಪರ್ಧಿಸಿದ್ದರು. ಹೀಗಾಗಿ, 'ಜನತಾದಳ ಮತ್ತು ಕಾಂಗ್ರೆಸ್ ಪಕ್ಷದ ವತಿಯಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದು ಬೇಡ, ಕಾರಂತರನ್ನು ಸಾಧ್ಯವಾದರೆ ಅವಿರೋಧವಾಗಿ ಆಯ್ಕೆಮಾಡೋಣ' ಎಂದು ಸಹೃದಯಿಗಳು ಕೋರಿದರೂ ಗಿಟ್ಟಲಿಲ್ಲ. ಈ ಚುನಾವಣೆಯಲ್ಲಿ ಕಾಂಗ್ರೆಸ್‌ನ ದೇವರಾಯ ನಾಯ್ಕರು ಗೆದ್ದರೆ ಅವರೆದುರು ಜನತಾದಳದಿಂದ ಸ್ಪರ್ಧಿಸಿದ್ದ ಚಿತ್ರನಟ ಅನಂತ್ ನಾಗ್ ಅವರು 'ರನ್ನರ್ ಅಪ್' ಎನಿಸಿಕೊಂಡರು. ಕಾರಂತರು ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು! ಒಂದೊಮ್ಮೆ ಅಂದೂ ಕಾರಂತರೆದುರು ಮಿಕ್ಕವರು ಸ್ಪರ್ಧಿಸದೆ ಇದ್ದಿದ್ದರೆ, ಶಿವರಾಮ ಕಾರಂತರ ಗರ್ಜನೆಯನ್ನು ಲೋಕಸಭೆಯಲ್ಲೂ ಕಾಣಬಹುದಿತ್ತೇನೋ? ಆದರೆ ಹಾಗಾಗಲಿಲ್ಲ, ಅದು ನಮ್ಮ ದುರದೃಷ್ಟ. ನೀವೇನಂತೀರಿ?!

ಯಾರು ಉತ್ತರದಾಯಿಗಳು?

ಗುಜರಾತ್ ವಿಧಾನಸಭೆಯ ವಿಷಯ ನಿಮಗೆ ಗೊತ್ತೇ ಇದೆ. 182 ಸ್ಥಾನಗಳ ಪೈಕಿ 156ನ್ನು ತನ್ನದಾಗಿಸಿಕೊಂಡು ಬೀಗುತ್ತಿರುವ ಅಲ್ಲಿನ ಭಾರತೀಯ ಜನತಾ ಪಕ್ಷದ ಸರಕಾರಕ್ಕೆ ವಿಪಕ್ಷಗಳಿಂದ ಹೇಳಿಕೊಳ್ಳುವಂಥ ಪ್ರತಿರೋಧವೇನೂ ಒದಗುತ್ತಿಲ್ಲ; ಆದರೆ ಆ ಕೆಲಸವನ್ನು ಕೆಲ ಸ್ವಪಕ್ಷೀಯ ನಾಯಕರೇ ಮಾಡುತ್ತಿರುವುದು ಹಲವರ ಹುಬ್ಬೇರಿಸಿದೆ. ಭರೂಚ್ ಕ್ಷೇತ್ರದ ಬುಡಕಟ್ಟು ಸಂಸದರಾಗಿರುವ ಮನ್‌ಸುಖ್ ವಸಾವಾ ಅವರು ಇಂಥ ಯತ್ನಕ್ಕೆ ಮುಂದಾಗಿರುವುದು ಈ ಮಾತಿಗೆ ಸಾಕ್ಷಿ. 'ನಿರ್ದಿಷ್ಟ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡಲೆಂದು ತಮ್ಮ ಪ್ರದೇಶದಲ್ಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಗಳಲ್ಲಿ ಒಂದಷ್ಟು ವ್ಯತ್ಯಾಸಗಳನ್ನು ಮಾಡಲಾಗಿದೆ' ಎಂದು ಮನ್ಸುಖ್ ವಸಾವಾ ಅವರು ಇತ್ತೀಚೆಗೆ ಆರೋಪಿಸಿದ್ದುಂಟು. ಮತ್ತೊಂದೆಡೆ, ರಾಜ್ಯದ ಸೆಹ್ರಾ ಕ್ಷೇತ್ರದ ಬಿಜೆಪಿ ಶಾಸಕ ಜೇಥಾ ಭಾರ್ವಾಡ್ ಅವರು ಕೂಡ 'ನಲ್ ಸೇ ಜಲ್' ಯೋಜನೆಯಲ್ಲಿ ಗುತ್ತಿಗೆದಾರರು ಮಾಡಿರುವ ಕಾಮಗಾರಿಗಳು ಕಳಪೆ ಮಟ್ಟದ್ದಾಗಿವೆ ಎಂದು ಆರೋಪಿಸಿದ್ದಾರಂತೆ. ಈ ಮಾತುಗಳನ್ನು ಕೇಳಿ ಕುಪಿತರಾದ ಸಂಬಂಧಿತ ಖಾತೆಯ ಮಂತ್ರಿಗಳು, 'ಈ ಕಾರ್ಯಗಳ ಅನುಷ್ಠಾನದ ಹೊಣೆ ಹೊತ್ತಿದ್ದ ಅಧಿಕಾರಿಗಳೇ ಇದಕ್ಕೆ ಉತ್ತರದಾಯಿಗಳು' ಎಂದು ಅವರ ಮೇಲೆ ಗೂಬೆ ಕೂರಿಸಿ ಕೈತೊಳೆದುಕೊಂಡರಂತೆ! ರಾಜಕಾರಣ ಅಂದ್ರೆ, ಒಂಥರಾ ಮಜಾ ಇರುತ್ತೆ, ಅಲ್ವಾ?!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:8, Issue:151